ಮಹಿಳೆಯರು ಎಷ್ಟೇ ಸಾಧನೆಯ ಶಿಖರವೇರುತ್ತಿದ್ದರೂ ಅವರನ್ನು ಸಮಾಜವು ನಿರ್ಲಕ್ಷ್ಯ ಮಾಡುತ್ತಿದೆ. ಹೆಣ್ಣಿಗಿಂತ ಗಂಡು ಮಗು ಶ್ರೇಷ್ಠ ಎಂಬ ಮನೋಭಾವನೆ ಇಂದಿಗೂ ಮುಂದುವರಿಯುತ್ತಿರುವುದು ದುರದೃಷ್ಟಕರ ಸಂಗತಿ.
● **ದಿವ್ಯ ಪ್ರಭು** ಜಿಲ್ಲಾಧಿಕಾರಿ

ಸುದ್ದಿ ಸಿಂಚನ

ಮುಖ್ಯಮಂತ್ರಿಗಳಿಂದ 42345 ಮನೆಗಳ ಹಸ್ತಾಂತರ 27ರಂದು

ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಮೃತ ಹಸ್ತರದಿಂದ ಏ. 27ರಂದು ಲೋಕಾರ್ಪಣೆಗೊಳ್ಳಲಿರುವ ಮಂಟೂರ ರಸ್ತೆಯ ಆಶ್ರಯ ಮನೆಗಳ ಅಂತಿಮ ಹಂತದ ಕಾಮಗಾರಿಯನ್ನು ಸ್ಲಂ ಬೋರ್ಡ್ ಅಧ್ಯಕ್ಷ, ಶಾಸಕ ಪ್ರಸಾದ ಅಬ್ಬಯ್ಯ ಶುಕ್ರವಾರ ಪರಿಶೀಲಿಸಿ ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಅಗತ್ಯ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ರಾಜ್ಯಾದ್ಯಂತ ನಿರ್ಮಾಣವಾಗುತ್ತಿರುವ 1.80 ಲಕ್ಷ ಮನೆಗಳ ಪೈಕಿ ಮೊದಲ ಹಂತದಲ್ಲಿ ಬೆಂಗಳೂರಿನ ಕೆ.ಆರ್.ಪುರಂ ನಾಗೇಶ್ವರ ನಾಗೇನಹಳ್ಳಿಯಲ್ಲಿ ಕಳೆದ ವರ್ಷ 36789 ಮನೆಗಳನ್ನು ಫಲಾನುಭವಿಗಳಿಗೆ ಈಗಾಗಲೇ ಹಸ್ತಾಂತರ ಮಾಡಲಾಗಿದೆ. ಮುಂದುವರೆದ ಭಾಗವಾಗಿ ರಾಜ್ಯಾದ್ಯಂತ 2ನೇ ಹಂತದ 42345 ಮನೆಗಳ ಹಸ್ತಾಂತರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹುಬ್ಬಳ್ಳಿಯಲ್ಲಿ ಏ. 27ರಂದು ಹಸ್ತಾಂತರಿಸಲಿದ್ದಾರೆ ಎಂದರು. ಬಿಜೆಪಿ ಆಡಳಿತಾವಧಿಯಲ್ಲಿ ಜನಪರ ಯೋಜನೆಗಳಿಗೆ ಉತ್ತೇಜನ ನೀಡುವುದನ್ನು ಬಿಟ್ಟು, ಬರೀ ರಾಜಕೀಯ ಮಾಡುತ್ತ ದುರಾಡಳಿತ ನಡೆಸಿದ್ದರ ಫಲವಾಗಿಯೇ ಇಂದು ಬಿಜೆಪಿಗೆ ನೆಲೆ ಇಲ್ಲದಂತಾಗಿದೆ ಎಂದರು. ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ರುದ್ರೇಶ ಘಾಳಿ, ಹೆಚ್ಚುವರಿ ಆಯುಕ್ತ ವಿಜಯಕುಮಾರ ಸೇರಿದಂತೆ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಸ್ಥಳೀಯರು ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಧಾರವಾಡ: ಕೈಮಗ್ಗ ಮತ್ತು ಜವಳಿ ಇಲಾಖೆಯ 2024-26ನೇ ಸಾಲಿನ ಜಿಲ್ಲಾ ವಲಯ ಯೋಜನೆಯಡಿ ಕೈಮಗ್ಗ ಉದ್ಯಮಿಗಳಿಗೆ ಸಹಾಯಧನ ಯೋಜನೆಯಡಿಯಲ್ಲಿ ನೋಂದಾಯಿತ, ಕಾರ್ಯನಿರತ ಕೈಮಗ್ಗ ನೇಕಾರ ಸಂಘಗಳಿಂದ ಸಹಾಯಧನ ಬೇಡಿಕೆಗಾಗಿ ಅರ್ಜಿ (ಪ್ರಸ್ತಾವನೆ) ಆಹ್ವಾನಿಸಲಾಗಿದೆ. ಧಾರವಾಡ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಬಹುದು. ಮಾಹಿತಿಗಾಗಿ 08362448834 ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಕಾಮಗಾರಿ ವೀಕ್ಷಣೆ

ಧಾರವಾಡ: ಕುಂದಗೋಳ ತಾಲೂಕಿನ ಹಿರೇನರ್ತಿ ಮತ್ತು ಯರಗುಪ್ಪಿ ಗ್ರಾಪಂಗೆ ಜಿಪಂ ಸಿಇಓ ಭುವನೇಶ ಪಾಟೀಲ ಭೇಟಿ ನೀಡಿ ಯರಗುಪ್ಪಿ ರೊಟ್ಟಿಗವಾಡ ರಸ್ತೆಯ ಶಂಕರ ಗೌಡ ಪಾಟೀಲ ಇವರ ಜಮೀನಿಂದ ದ್ಯಾವಪ್ಪ ಹೊಸಮನಿ ಇವರ ಜಮೀನಿನವರೆಗೆ ಕಾಲುವೆ ಹೂಳೆತ್ತುವ ಕಾಮಗಾರಿ ಪರಿಶೀಲಿಸಿದರು. ಸ್ಥಳದಲ್ಲಿದ್ದ ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು. ನಂತರ ಹಿರೇನರ್ತಿ ಗ್ರಾಮದ ರಾಮನ ಗೌಡ್ರು ಬಳಗಲಿ ಜಮೀನಿನ ಬಳಿಯ ಕಾಲುವೆ ನಿರ್ಮಾಣ ಕಾಮಗಾರಿ ಪರಿವೀಕ್ಷಣೆ ಮಾಡಿ ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು. ಕೂಲಿ ಕಾರ್ಮಿಕರಿಗೆ ಆರ್ಥಿಕದಲ್ಲಿ ಕೂಲಿ ಮೊತ್ತವು ₹ 349 ರಿಂದ 370 ಹೆಚ್ಚಳವಾಗಿರುವ ಬಗ್ಗೆ ಕಾರ್ಮಿಕ ವರ್ಗಕ್ಕೆ ತಿಳಿಸಿದರು.

ರೈಲ್ವೆ ಭದ್ರತೆಗೆ ಹೋಂಗಾರ್ಡ್ ಬಳಕೆಗೆ ನಿರ್ಧಾರ

ನೈಋತ್ಯ ರೈಲ್ವೆ ವಲಯದಲ್ಲಿ 389 ಗೃಹರಕ್ಷಕ ದಳದ ಸಿಬ್ಬಂದಿ ನಿಯೋಜನೆಗೆ ಕ್ರಮ | ಆರ್‌ಪಿಎಫ್ ಸಿಬ್ಬಂದಿ ಕೊರತೆ ಹಿನ್ನೆಲೆ ಕ್ರಮ

● **ಶಿವಾನಂದ ಗೊಂಬಿ**
ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ

ರೈಲ್ವೆ ಪ್ರಯಾಣಿಕರ ಸುರಕ್ಷತೆ ಹಾಗೂ ಭದ್ರತೆಗೆ ಇರುವ ಆರ್‌ಪಿಎಫ್ ಸಿಬ್ಬಂದಿ ಕೊರತೆ ನೀಗಿಸುವ ಉದ್ದೇಶದಿಂದ ಇದೀಗ ಹೋಂಗಾರ್ಡ್ ಬಳಕೆ ಮಾಡಲು ನೈಋತ್ಯ ರೈಲ್ವೆವಲಯವೂ ಮುಂದಾಗಿದೆ. ಆರ್‌ಪಿಎಫ್ ಸಿಬ್ಬಂದಿ ನೇಮಕವಾಗುವ ವರೆಗೂ ಹೋಂಗಾರ್ಡ್ ಬಳಕೆ ಮಾಡುವ ಉದ್ದೇಶ ವಲಯದ್ದು.

ಬೆಂಗಳೂರು, ಹುಬ್ಬಳ್ಳಿ, ಮೈಸೂರು ಹೀಗೆ ಮೂರು ವಿಭಾಗಗಳನ್ನು ಒಳಗೊಂಡಿರುವ ದೊಡ್ಡ ವಲಯ ನೈಋತ್ಯ ರೈಲ್ವೆಯದ್ದು. ಪ್ರತಿನಿತ್ಯ ನೂರಾರು ರೈಲು ಸಂಚರಿಸುತ್ತವೆ. ಲಕ್ಷಾಂತರ ಜನ ಪ್ರಯಾಣಿಕರು ಪ್ರಯಾಣಿಸುತ್ತಾರೆ. ರೈಲುಗಳಲ್ಲಿ ಆಗಾಗ ಕಳ್ಳತನ, ಹೊಡೆದಾಟ, ಮಹಿಳೆಯರನ್ನು ಚುಡಾಯಿಸುವಂತಹ ಘಟನೆಗಳು ನಡೆಯುವುದು ಸರ್ವೇ ಸಾಮಾನ್ಯ. ಕೆಲ ವೇಳೆಯಂತೂ ಕೆಲವು ಕಿಡಿಗೇಡಿಗಳು ಟಿಕೆಟ್ ಇಲ್ಲದೇ ಎಸಿ ಕೋಚ್, ಸ್ಲೀಪರ್ ಕೋಚ್‌ಗಳಲ್ಲಿ ನುಗ್ಗುತ್ತಾರೆ. ಆಗ

ಸಹಪ್ರಯಾಣಿಕರಿಗೂ ಕಿರಿಕಿರಿಯಾಗುತ್ತದೆ. ಭಯವೂ ಉಂಟಾಗುವುದುಂಟು.

ಇತ್ತೀಚೆಗೆ ರಾಜ್ಯದಲ್ಲಿ ಸದ್ದು ಮಾಡಿದ್ದ ಅಂಜಲಿ ಅಂಬಿಗೇರ ಹತ್ಯೆ ಪ್ರಕರಣದ ಆರೋಪಿ ದಾವಣಗೆರೆಯಲ್ಲಿ ರೈಲಿನಲ್ಲೇ ಮಹಿಳೆಯೊಬ್ಬರೊಂದಿಗೆ ಜಗಳ ತೆಗೆದು ಚಾಕುವಿನಿಂದ ಇರಿದಿದ್ದ ಘಟನೆಯೂ ನಡೆದಿದ್ದುಂಟು. ಆರೋಪಿಯನ್ನು ಬಂಧಿಸಿದ್ದು ಕೂಡ ಆರ್‌ಪಿಎಫ್ ಸಿಬ್ಬಂದಿಯೇ ಎಂಬುದು ವಿಶೇಷ. ಇಂಥ ಘಟನೆ ನಡೆಯದಂತೆ ನೋಡಿಕೊಳ್ಳಬೇಕು, ಪ್ರಯಾಣಿಕರಿಗೆ ಸುರಕ್ಷತೆಯ ಬಗ್ಗೆ ಭರವಸೆ ನೀಡಬೇಕು ಎಂಬುದು ರೈಲ್ವೆ ಇಲಾಖೆಯ ಜವಾಬ್ದಾರಿ.

> **ಆರ್‌ಪಿಎಫ್ ಸಿಬ್ಬಂದಿ ಕೊರತೆ ಸರಿದೂಗಿಸಲು ಹೋಂಗಾರ್ಡ್‌ಗಳನ್ನು ತಾತ್ಕಾಲಿಕವಾಗಿ ತೆಗೆದುಕೊಳ್ಳಲು ವಲಯ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಪ್ರಕ್ರಿಯೆ ಕೂಡ ಶುರುವಾಗಿದೆ. ಖಾಲಿ ಇರುವ ಹುದ್ದೆಗಳಿಗೆ ಆರ್‌ಪಿಎಫ್ ಸಿಬ್ಬಂದಿ ನೇಮಕವಾದ ಬಳಿಕ ಹೋಂಗಾರ್ಡ್‌ಗಳನ್ನು ಕೈಬಿಡಲಾಗುವುದು.**
> ● **ಮಂಜುನಾಥ ಕನಮಡಿ**
> ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ನೈಋತ್ಯ ರೈಲ್ವೆ ವಲಯ

ಹೀಗಾಗಿ ಪ್ರತಿ ರೈಲುಗಳಲ್ಲಿ ಆರ್‌ಪಿಎಫ್ ಸಿಬ್ಬಂದಿ ಇರಬೇಕು. ಇದು ಪ್ರಯಾಣಿಕರ ಸುರಕ್ಷತೆಗಾಗಿ ಅಗತ್ಯ ಹಾಗೂ ಅನಿವಾರ್ಯ. ಜತೆ ಜತೆಗೆ ರೈಲು ನಿಲ್ದಾಣಗಳಲ್ಲಿ ಆರ್‌ಪಿಎಫ್ ಸಿಬ್ಬಂದಿಯನ್ನು ನಿಯೋಜಿಸುವುದು ಕೂಡ ಅಷ್ಟೇ ಅಗತ್ಯ.

ಎಷ್ಟು ಕೊರತೆ?: ವಲಯಕ್ಕೆ 1577 ಆರ್‌ಪಿಎಫ್ ಸಿಬ್ಬಂದಿ ಮಂಜೂರಾದ ಹುದ್ದೆಗಳು. ಆದರೆ 1100 ಸಿಬ್ಬಂದಿ ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, ಶೇ. 30ರಷ್ಟು ಸಿಬ್ಬಂದಿ ಕೊರತೆ ಇದೆ. ಇದನ್ನು ಸರಿದೂಗಿಸಲು ರೈಲ್ವೆ ಮಂಡಳಿಗೆ ಮನವಿ ಮಾಡಲಾಗಿದೆ. ಖಾಲಿಯಿರುವ ಸಿಬ್ಬಂದಿ ಭರ್ತಿ ಕಾರ್ಯ ನಡೆಯುತ್ತಿದೆ. ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಹೋಂ ಗಾರ್ಡ್‌ಗಳನ್ನು ಬಳಕೆ ಮಾಡಲು ನಿರ್ಧರಿಸಲಾಗಿದೆ.

ಹುಬ್ಬಳ್ಳಿ ವಿಭಾಗದಲ್ಲಿ 112 ಆರ್‌ಪಿಎಫ್ ಹುದ್ದೆ ಖಾಲಿ ಇದ್ದು, 110 ಹೋಂಗಾರ್ಡ್ ಬಳಕೆ ಮಾಡಿಕೊಳ್ಳುವ ಯೋಚನೆ ಇದೆ. ಮೈಸೂರು ವಿಭಾಗದಲ್ಲಿ 114 ಖಾಲಿ ಇವೆ. ಅಲ್ಲಿ 108 ಹೋಂ ಗಾರ್ಡ್, ಬೆಂಗಳೂರು ವಿಭಾಗದಲ್ಲಿ ಖಾಲಿಯಿರುವ 160 ಆರ್‌ಪಿಎಫ್ ಹುದ್ದೆಗಳಿಗೆ ಹೋಂಗಾರ್ಡ್ ಬಳಸಿಕೊಳ್ಳಲು ಮುಂದಾಗಿದೆ. ಹೋಂಗಾರ್ಡ್ ಸಿಬ್ಬಂದಿ ನಿಯೋಜಿಸಲು ಬೇಕಾದ ಪ್ರಕ್ರಿಯೆ ಈಗಾಗಲೇ ಪ್ರಾರಂಭಿಸಲಾಗಿದೆ. ಇನ್ನೊಂದು ತಿಂಗಳು ಅಥವಾ ಎರಡು ತಿಂಗಳು ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಬಳಿಕ ಗೃಹ ರಕ್ಷಕ ದಳದ ಸಿಬ್ಬಂದಿ ಕೆಲಸಕ್ಕೆ ಹಾಜರಾಗಲಿದ್ದಾರೆ ಎಂದು ಮೂಲಗಳು ತಿಳಿಸುತ್ತವೆ.

ಎಲ್ಲಿ ಬಳಕೆ?: ಹೋಂ ಗಾರ್ಡ್‌ಗಳನ್ನು ನಿಯೋಜಿಸಿಕೊಂಡರೂ ಅವರನ್ನೇನೂ ರೈಲುಗಳಲ್ಲಿ ರಕ್ಷಣೆಗೆ ನಿಯೋಜಿಸಲ್ಲ. ನಿಲ್ದಾಣ ಸೇರಿದಂತೆ ಒಂದೇಕಡೆ ನಿಂತುಕೊಂಡು ಭದ್ರತೆ ಒದಗಿಸುವಂತಹ ಸ್ಥಳಗಳಲ್ಲಿ ಹೋಂಗಾರ್ಡ್‌ಗಳನ್ನು ನಿಯೋಜಿಸಲಾಗುವುದು. ಅಲ್ಲಿ ಇರುವ ಆರ್‌ಪಿಎಫ್ ಸಿಬ್ಬಂದಿಯನ್ನು ರೈಲುಗಳಲ್ಲಿ ಪ್ರಯಾಣಿಕರ ರಕ್ಷಣೆಗೆ ಬಳಸಿಕೊಳ್ಳಲಾಗುವುದು. ಈ ಮೂಲಕ ಪ್ರಯಾಣಿಕರ ರಕ್ಷಣೆಯ ಜತೆಗೆ ಯಾವುದೇ ಬಗೆ ನಿರ್ಲಕ್ಷ್ಯ ತೋರದೇ, ಆರ್‌ಪಿಎಫ್ ಸಿಬ್ಬಂದಿ ಕೊರತೆ ಎದುರಾಗದಂತೆ ನೋಡಿಕೊಳ್ಳುವ ಉದ್ದೇಶ ವಲಯದ್ದು. ಒಟ್ಟಿನಲ್ಲಿ ನೈಋತ್ಯ ರೈಲ್ವೆ ವಲಯ ಒಳ್ಳೆಯ ನಿರ್ಧಾರ ಮಾಡಿರುವುದಂತೂ ಸತ್ಯ. ಆದಷ್ಟು ಬೇಗನೆ ಇದು ಅನುಷ್ಠಾನಗೊಳ್ಳಬೇಕು ಎಂಬುದು ಪ್ರಯಾಣಿಕರ ಅಂಬೋಣ.

ಸ್ಮಾರ್ಟ್‌ಸಿಟಿ ಕಚೇರಿಯಲ್ಲೇ ನಗರ ನೀರು ಸರಬರಾಜು ಮಂಡಳಿ!

ಸ್ಮಾರ್ಟ್‌ಸಿಟಿ ಕ್ಲೋಸ್ ಆಗುವುದು ಪಕ್ಕಾ!

● **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಸ್ಮಾರ್ಟ್‌ಸಿಟಿ ಯೋಜನೆ ಮುಕ್ತಾಯ ಮಾಡುವ ಕುರಿತಂತೆ ಸರ್ಕಾರದಿಂದ ಯಾವುದೇ ಆದೇಶ ಬಂದಿಲ್ಲ. ಆದರೆ ಸ್ಮಾರ್ಟ್ ಸಿಟಿ ಕಚೇರಿಗೆ ಇದೀಗ ಉತ್ತರ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಕಚೇರಿ ಸ್ಥಳಾಂತರವಾಗಿದೆ. ಈ ಮೂಲಕ ಸ್ಮಾರ್ಟ್‌ಸಿಟಿ ಯೋಜನೆ ಕ್ಲೋಸ್ ಆಗುವುದು ಪಕ್ಕಾ ಆದಂತಾಗಿದೆ.

2018ರಲ್ಲಿ ಪ್ರಾರಂಭವಾಗಿದ್ದ ಸ್ಮಾರ್ಟ್‌ಸಿಟಿ ಯೋಜನೆಯ ಅವಧಿ ಈ ಮಾ.31ಕ್ಕೆ ಮುಕ್ತಾಯಗೊಂಡಿದೆ. ಈ ಸಂಬಂಧ ಮಾ. 27ಕ್ಕೆ ಹೈಪವರ್ ಕಮಿಟಿ ಸಭೆಯೂ ನಡೆದು ಯಾವ್ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿತ್ತು. ಅವುಗಳನ್ನು ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸುವಂತೆ ಸೂಚಿಸಿದೆ. ಆದರೆ ಈ ಬಗ್ಗೆ ಅಧಿಕೃತ ಆದೇಶ ಹೊರಬಂದಿಲ್ಲ. ಈ ನಡುವೆ ಏ. 7ರಂದು ಕೇಂದ್ರ ಸರ್ಕಾರ ನಗರಾಭಿವೃದ್ಧಿ ಮಂತ್ರಾಲಯದಡಿ ಸಭೆ ನಡೆಯಲಿದೆ. ಅಲ್ಲಿ ಹುಬ್ಬಳ್ಳಿ-ಧಾರವಾಡ ಸೇರಿದಂತೆ ಕರ್ನಾಟಕದಲ್ಲಿ ಸ್ಮಾರ್ಟ್‌ಸಿಟಿ ಯೋಜನೆ ಬಗ್ಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತಿದೆ. ಆ ಬಳಿಕ ರಾಜ್ಯ ಸರ್ಕಾರ ಹಾಗೂ ಎಲ್ಲೆಲ್ಲಿ ಸ್ಮಾರ್ಟ್‌ಸಿಟಿ ನಡೆಯುತ್ತಿದೆಯೋ ಆ ಕಚೇರಿಗಳಿಗೆ ಅಧಿಕೃತ ಪತ್ರ ಬರಲಿದೆ. ಅದರ ಆಧಾರದಮೇಲೆ ಸ್ಮಾರ್ಟ್‌ಸಿಟಿ ಯೋಜನೆಯ ಭವಿಷ್ಯ ಅಡಗಿದೆ. ಆದರೆ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಈಗಾಗಲೇ ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿದ್ದ ಗುತ್ತಿಗೆ ನೌಕರರ ಪೈಕಿ ಬಹುತೇಕರು ರಾಜೀನಾಮೆ ನೀಡಿ ಮನೆಗಳಿಗೆ ತೆರಳಿರುವುದುಂಟು. ಸರ್ಕಾರದಏರುವಲಾಗಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ ವರ್ಗ ಹಾಗೂ ಕೆಲ ಬೆರಳಿಣಿಕೆಯಷ್ಟು ಗುತ್ತಿಗೆ ನೌಕರರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ.

ನೀರು ಸರಬರಾಜು ಕಚೇರಿ...

ಈ ನಡುವೆ ಸ್ಮಾರ್ಟ್‌ಸಿಟಿ ಕಚೇರಿಯೂ ಸಾಂಸ್ಕೃತಿಕ ಭವನದಲ್ಲಿದೆ. ಆ ಕಚೇರಿಯಲ್ಲೇ ಇದೀಗ ಉತ್ತರ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಕಚೇರಿ ಸ್ಥಳಾಂತರಗೊಂಡಿದೆ. ಸ್ಮಾರ್ಟ್‌ಸಿಟಿ ಸಿಬ್ಬಂದಿಕುಳಿತುಕೊಳ್ಳುತ್ತಿದ್ದಜಾಗೆಗಳಲ್ಲೇ ನೀರು ಸರಬರಾಜು ಮಂಡಳಿ ಸಿಬ್ಬಂದಿ ಕುಳಿತು ಕೆಲಸ ಮಾಡುತ್ತಿದ್ದಾರೆ. ಆದರೆ ಬೋರ್ಡ್ ಮಾತ್ರ ಅಳವಡಿಸಿಲ್ಲ. ಇನ್ನು ಸ್ಮಾರ್ಟ್‌ಸಿಟಿ ಎಂದೇ ಬೋರ್ಡ್ ಇದೆ. ಶೀಘ್ರದಲ್ಲೇ ಉತ್ತರ ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಬೋರ್ಡ್ ಕೂಡ ಬರಲಿದೆ ಎಂದು ಅಧಿಕಾರಿ ವರ್ಗ ಹೇಳುತ್ತಿದೆ. ಈ ಮೂಲಕ ಸ್ಮಾರ್ಟ್‌ಸಿಟಿ ಯೋಜನೆ ಮುಕ್ತಾಯವಾಗುವುದು ಪಕ್ಕಾ ಆದಂತಾಗಿದೆ.

ಈ ಕುರಿತಂತೆ ಮಾತನಾಡಿದ ಸ್ಮಾರ್ಟ್‌ಸಿಟಿ ಮುಖ್ಯಲೆಕ್ಕಾಧಿಕಾರಿ ಧರಣಿ ಅವರು, ಸ್ಮಾರ್ಟ್‌ಸಿಟಿ ಕ್ಲೋಸ್ ಮಾಡುವ ಕುರಿತಂತೆ ಯಾವುದೇ ಆದೇಶ ಬಂದಿಲ್ಲ. ಆದರೆ ಇದೀಗ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಚೇರಿ ಬಂದಿದೆ ಎಂದರು.

ಎಲ್ಲಿ ನೋಡಿದರಲ್ಲಿ ಬಿಸಿಲಿನುಸಿರು...!

CAMPAIGN ಬೇಸಿಗೆಯ ಬೇಗೆ

ಧಾರವಾಡ ಜಿಲ್ಲೆಯಲ್ಲಿ ಪ್ರತಿ ವರ್ಷಕ್ಕಿಂತ ಈ ಬಾರಿ ಬಿಸಿಲಿನಾರ್ಭಟ ಹೆಚ್ಚಾಗಿದೆ. ಎಲ್ಲಿ ನೋಡಿದರಲ್ಲೂ ಬಿಸಿಲಿನ ಪ್ರಖರತೆಯಿಂದಾಗಿ ಸಾರ್ವಜನಿಕರು, ಜಾನುವಾರುಗಳು ಇನ್ನಿಲ್ಲದ ಸಮಸ್ಯೆ ಅನುಭವಿಸುತ್ತಿದ್ದಾರೆ. ನಿತ್ಯದ ಕೆಲಸ, ಕಾರ್ಯಗಳಿಗೆ ತೆರಳುವ ಜನರು ಛತ್ರಿ, ಮುಖಕ್ಕೆ ಮಾಸ್ಕ್ ಹಾಕಿಕೊಂಡು ಸಂಚರಿಸುತ್ತಿದ್ದಾರೆ. ಇನ್ನು ಕೆಲವರು ಬಿಸಿಲಿನ ದಾಹ ತಣಿಸಲು ಕಲ್ಲಂಗಡಿ, ಕಬ್ಬಿನ ಹಾಲು ಸೇರಿದಂತೆ ತಂಪು ಪಾನೀಯಗಳ ಮೊರೆ ಹೊಗುತ್ತಿದ್ದಾರೆ. ಇನ್ನು ಕೆಲವರು ಮನೆಯನ್ನು ತಂಪಾಗಿರಿಸಲು ಏರ್ ಕೂಲರ್‌ಗಳ ಮೊರೆ ಹೋಗುತ್ತಿದ್ದಾರೆ. ವಾಣಿಜ್ಯ ನಗರ ಹುಬ್ಬಳ್ಳಿಯಲ್ಲಿ ಬಿಸಿಲಿನ ಬೇಗೆಯಲ್ಲಿ ಜನರು ಸಂಚರಿಸುತ್ತಿದ್ದ ವೇಳೆ ಕನ್ನಡಪ್ರಭದ ಕ್ಯಾಮರಾ ಕಣ್ಣಿಗೆ ಕಂಡಿದ್ದು ಹೀಗೆ...

ಚಿತ್ರ: ಈರಪ್ಪ ನಾಯ್ಕರ್

ಬಿಸಿಲಿನ ಪ್ರಖರತೆ ಹೆಚ್ಚಾದ ಹಿನ್ನೆಲೆಯಲ್ಲಿ ಕಾಲೇಜಿಗೆ ತೆರಳುತ್ತಿದ್ದ ವಿದ್ಯಾರ್ಥಿನಿಯರು ಕೊಡೆ (ಛತ್ರಿ) ಹಿಡಿದು ತೆರಳುತ್ತಿರುವುದು.

ಬಿಸಿಲಿನ ಬೇಗೆಯ ದಣಿವಾರಿಸಿಕೊಳ್ಳಲು ತಾಯಿಯು ಮಗುವಿಗೆ ಹಣ್ಣಿನ ಅಂಗಡಿಯೊಂದರಲ್ಲಿ ಕಲ್ಲಂಗಡಿ ತಿನ್ನಿಸಿ ಸಮಾಧಾನಪಡಿಸಿದಳು.

ಬಿಸಿಲಿನ ಪ್ರಖರತೆ ಪೊಲೀಸರಿಗೂ ತಟ್ಟಿದ್ದು, ದಣಿವಾರಿಸಿಕೊಳ್ಳಲು ಟ್ರಾಫಿಕ್ ಪೊಲೀಸರೋರ್ವರು ನೀರು ಕುಡಿದು ದಣಿವಾರಿಸಿಕೊಂಡರು.

ಬಿಸಿಲಿನ ಬೇಗೆ ನಿವಾರಿಸಿಕೊಳ್ಳಲು ದ್ವಿಚಕ್ರವಾಹನದಲ್ಲಿ ಇಬ್ಬರು ಕುಟುಂಬಸ್ಥರು ಏರ್ ಕೂಲರ್ ಖರೀದಿಸಿ ಮನೆಗೆ ತೆಗೆದುಕೊಂಡು ಹೋಗುತ್ತಿರುವುದು.

ಬಿಸಿಲಿನ ಪ್ರಖರತೆಯಿಂದ ತಪ್ಪಿಸಿಕೊಳ್ಳಲು ತರಕಾರಿ ಮಾರಾಟ ಮಾಡುತ್ತಿದ್ದ ಮಹಿಳೆಯೋರ್ವಳು ಕೊಡೆಯ ಮೊರೆ ಹೋಗಿರುವುದು.

ಹುಬ್ಬಳ್ಳಿಯಲ್ಲಿ ಬೀಸಿಲಿನ ಬೇಗೆಯಿಂದ ಮಂಗವೊಂದು ಮನೆಯ ಮುಂದೆ ಇರಿಸಲಾಗಿದ್ದ ಬಕೆಟ್‌ನಲ್ಲಿನ ನೀರು ಕುಡಿದು ದಣಿವಾರಿಸಿಕೊಳ್ಳುತ್ತಿರುವುದು.

ಪುರುಷರಿಗಿಂತ ಮಹಿಳೆಯರ ಸಾಧನೆ ಹೆಚ್ಚು: ದಿವ್ಯ ಪ್ರಭು

● **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಎಲ್ಲ ಕ್ಷೇತ್ರಗಳಲ್ಲೂ ಪುರುಷರಿಗಿಂತ ಹೆಚ್ಚು ಮಹಿಳೆಯರೇ ಸಾಧನೆ ಮಾಡುತ್ತಿದ್ದು, ಬಾಹ್ಯಾಕಾಶದಲ್ಲಿ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಮಾಡಿದ ಸಾಧನೆ ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಹೇಳಿದರು.

ಇಲ್ಲಿನ ಜೆಸಿ ನಗರದ ಕರ್ನಾಟಕ ಚೇಂಬರ್‌ಆಫ್ ಕಾಮರ್ಸ್ ಸಭಾಭವನದಲ್ಲಿ ಕೆಸಿಸಿಐ ಮಹಿಳಾ ಉದ್ದಿಮೆದಾರರ ಸಮಿತಿ ವತಿಯಿಂದ ಶುಕ್ರವಾರ ಸಂಜೆ ನಡೆದ ವೃದ್ಧಿ -2025ರ ಮಹಿಳಾ ದಿನಾಚರಣೆ ಹಾಗೂ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಆಧುನಿಕತೆ ಹಾಗೂ ಎಐ ತಂತ್ರಜ್ಞಾನ